**M.V.C.No. 313/2019**
**RW: 1**

**ಸಾಕ್ಷಿಯನ್ನು ದಿಃ *20/11/2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಃ ಎದುರುದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| **ನಿ.ಆರ್.1** | ಅಧಿಕಾರ ಪತ್ರ |
| **ನಿ.ಆರ್.2** | ವಿಮೆ ಪ್ರತಿ |
| **ನಿ.ಆರ್.3** | ರಾಂಚಿ ಆರಟಿಓ ಇವರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಸಿರುವ ಅರ್ಜಿ |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅರ್ಜಿಯನ್ನು ವಜಾ ಮಾಡಬೇಕಾಗಿ ವಿನಂತಿ.

***ಪಾಟೀ ಸವಾಲು ಃ ಅರ್ಜಿದಾರರ ಪರ ವಕೀಲರಿಂದ.***

ಪೊಲೀಸರು ಸಲ್ಲಿಸಿರುವ ಅಂತಿಮ ವರದಿಯಲ್ಲಿ ಮೋಟಾರುಸೈಕಲ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿಲ್ಲ ಎಂದು ನಮೂದಿಸಿಲ್ಲ ಎಂದರೆ ಸರಿ. ಸದರಿ ಅಂತಿಮ ವರದಿಯನ್ನು ಇಲ್ಲಿಯವರೆಗೂ ಪ್ರಶ್ನಿಸಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಯಲ್ಲಿ ಸಹ ಸದರಿ ಮೋಟಾರುಸೈಕಲ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿಲ್ಲ ಎಂದು ದೃಢೀಕರಿಸಿದ್ದು ಇರುವುದಿಲ್ಲ ಎಂದರೆ ಸಾಕ್ಷಿದಾರರು ನಕಲಿ ಚಾಲನಾ ಪರವಾನಿಗೆ ಪತ್ರವಿತ್ತು ಎಂದು ಉತ್ತರಿಸುತ್ತಾರೆ. ಸದರಿ ಮೋಟಾರುಸೈಕಲಗೆ ಸೂಕ್ತ ವಿಮೆ ಇದ್ದು, ನಾವು ಪರಿಹಾರ ಹಣ ಕೊಡಲು ಬಾಧ್ಯಸ್ಥರಿದ್ದರು ಸಹ ಚಾಲನಾ ಪರವಾನಿಗೆ ಪತ್ರವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.